**<u>ದಿನಾಂಕಃ 11.12.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಸ್ವತಃ ನ್ಯಾಯಾಲಯದ ನಿಯೋಗಿಯಿಂದಃ-</u>**

1. **ಹೆಸರು** - **ಮರಿಲಿಂಗೇಗೌಡ**
2. **ತಂದೆ ಹೆಸರು** - **ಜಿ. ಶಿವರಾಮಯ್ಯ**
3. **ವಯಸ್ಸು** - 41 **ವರ್ಷ**
4. **ಉದ್ಯೋಗ** - **ಭೂಮಾಪಕರು**, **ಚನ್ನಪಟ್ಟಣ**
5. **ವಾಸ** – **ಚನ್ನಪಟ್ಟಣ**

1) ನಾನು ಈ ಪ್ರಕರಣದಲ್ಲಿ ಸರ್ವೆ ನಂ.467 ರಲ್ಲಿ ಅತಿಕ್ರಮಣ ಆಗಿರುವ ಬಗ್ಗೆ ಸ್ವತ್ತನ್ನು ಅಳತೆ ಮಾಡಲು ನ್ಯಾಯಾಲಯದ ನಿಯೋಗಿಯಾಗಿ ನೇಮಕಗೊಂಡಿದ್ದೆನು. ಅದರಂತೆ ನಾನು ಅಳತೆ ಮಾಡುವ ಪೂರ್ವದಲ್ಲಿ ಉಭಯ ಪಕ್ಷಗಾರರಿಗೂ ಪೂರ್ವ ನೋಟೀಸನ್ನು ನೀಡಿದ್ದೆನು. ತದನಂತರ ದಿಃ14.10.2024 ಮತ್ತು 15.10.2024 ರಂದು ಸ್ಥಳಕ್ಕೆ ಖುದ್ದು ಭೇಟಿ ಕೊಟ್ಟು ಪಕ್ಷಗಾರರ ಸಮಕ್ಷಮ ಅಳತೆ ಕಾರ್ಯವನ್ನು ಮಾಡಿರುತ್ತೇನೆ. ಅಳತೆ ಪೂರ್ವದಲ್ಲಿ ಕುಮಾರ ಬಿನ್ ಮೂಗೂರೇಗೌಡ ರವರ ಹಾಜರು ಇರಲಿಲ್ಲ. ಸದರಿಯವರಿಗೂ ಸಹ ನೋಟೀಸನ್ನು ಕಳುಹಿಸಿದ್ದೆನು. ನಾನು ಅಳತೆ ಕಾರ್ಯ ನಿರ್ವಹಿಸಿ ಸಮಗ್ರ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

2) ಸಾಕ್ಷಿಯು ತಾನು ಸಲ್ಲಿಸಿರುವ ವರದಿಯನ್ನು ನೋಡಿ ಗುರುತಿಸಿದ್ದು ಸದರಿ ವರದಿಯನ್ನು ನಿಸಿ.1 ಎಂದು ಗುರುತಿಸಲಾಯಿತು.

3) ನಕಾಶೆಯನ್ನು (ಎರಡು ಹಾಳೆ) ನಿಸಿ.2 ಎಂದು ಗುರುತಿಸಲಾಯಿತು.

4) ಸ್ಥಳದಲ್ಲಿ ವಾದಿ ಮತ್ತು ಪ್ರತಿವಾದಿಗಳ ಸಮಕ್ಷಮ ಅಳತೆ ಸಮಯದಲ್ಲಿ ತಯಾರಿಸಿದ ಎರಡು ವರದಿಗಳನ್ನು ಕ್ರಮವಾಗಿ ನಿಸಿ.3 ಮತ್ತು 4 ಎಂದು ಗುರುತಿಸಲಾಯಿತು.

5) ಉಭಯ ಪಕ್ಷಗಾರರಿಗೆ ನೀಡಿದ ಮೂರು ತಿಳುವಳಿಕೆ ನೋಟೀಸ್‌ನ ಪ್ರತಿಗಳನ್ನು ಹಾಜರುಪಸಿಡಿದ್ದು ಅವುಗಳನ್ನು ಕ್ರಮವಾಗಿ ನಿಸಿ.5 ರಿಂದ 7 ಎಂದು ಗುರುತಿಸಲಾಯಿತು.

6) ಪಕ್ಷಗಾರರಿಗೆ ತಿಳುವಳಿಕೆ ನೋಟೀಸ್‌ನ ನೀಡಿದ ಸಂಬಂಧ ಅಂಚೆ ರಶೀದಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಸಿ.8 ಎಂದು ಗುರುತಿಸಲಾಯಿತು.

7) 5ನೇ ಪ್ರತಿವಾದಿಗೆ ನೀಡಿದ ನೋಟೀಸ್ ಲಖೋಟೆಯೊದಿಂಗೆ ಹಿಂತಿರುಗಿ ಬಂದಿದ್ದು ಅದನ್ನು ನಿಸಿ.9 ಎಂದು ಗುರುತಿಸಲಾಯಿತು.

8) ಆಕಾರ್ ಬಂದ್ ರೀತಿ ಸರ್ವೆ ನಂ.467 ರ ಸ್ವತ್ತಿನ ಆಕಾರ ಬಂದ್ ವಿಸ್ತೀರ್ಣ ಪ್ರತಿಯನ್ನು ಹಾಜರುಪಸಿಡಿದ್ದು ಅದನ್ನು ನಿಸಿ.10 ಎಂದು ಗುರುತಿಸಲಾಯಿತು.

**ಮರು ವಿಚಾರಣೆಃ- ಇಲ್ಲ.**

**<u>ಪಾಟೀ ಸವಾಲುಃ- ವಾದಿ ಮತ್ತು ಪ್ರತಿವಾದಿಗಳ ಪರ ವಕೀಲರು ಸಮಯಾವಕಾಶ ಕೋರಿದ್ದು ಪ್ರಕರಣವನ್ನು ಮುಂದೂಡಲಾಯಿತು.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ**
**ನ್ಯಾಯಾಲಯ, ಚನ್ನಪಟ್ಟಣ.**